ಎಂ ಸಿ. ನಂಬರ:- 27/2025

ಪಿ.ಢಬ್ಲೂ -:-1 : ರಘೋತ್ತಮ ತಂದೆ ಪರಶುರಾಮ ಕೊಡತೆ

ದಿನಾಂಕ:- 19-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು : ಶ್ರೀ. ಎಸ್ ಎಸ್ ಪಿ ವಕೀಲರಿಂದ :-***

ನನ್ನ ಮತ್ತು ಎದುರುದಾರರ ಮದುವೆ ಇಂಡಿಯಲ್ಲಿ ಹಿಂದು ಸಂಪ್ರದಾಯದಂತೆ ಆಗಿರುತ್ತದೆ. ದಿನಾಂಕ 29-11-2024 ರಂದು ನಾವು ನಮ್ಮ ಮದುವೆಯನ್ನು ನೋಂದಣಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನನಗೆ ನನ್ನ ಹೆಂಡತಿ ಕಡೆಯವರು ೨೦೦ ಗ್ರಾಮ ಬಂಗಾರ ನೀಡಿ, ಇಪ್ಪತ್ತೈದು ಲಕ್ಷ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮನೆಯವರು ನನಗೆ ಗೃಹೋಪಯೋಗಿ ಸಾಮಾನುಗಳನ್ನೂ ಕೂಡಾ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಮುಂದಿನ ವಿದ್ಯಾಭ್ಯಾಸ ಮಾಡಿಸುವುದಾಗಿ ಒಪ್ಪಿಕೊಂಡು ನಾನು ಮದುವೆ ಆಗಿದ್ದೆ ಎಂದರೆ ಸರಿಯಲ್ಲ. ಮದುವೆಯಾದ ಮೇಲೆ ನನ್ನ ಹೆಂಡತಿ ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿ. ಮದುವೆಯಾದ ಮೇಲೆ ನನ್ನ ಹೆಂಡತಿ ಕೇವಲ ೧ ತಿಂಗಳು ನನ್ನ ಜೊತೆಗೆ ಇದ್ದಳು. ನಾನು ರೇಣುಕಾ ಶುಗರ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತೇನೆ. ನನ್ನ ಊರು ಇಂಡಿ ಆಗಿರುತ್ತದೆ. ನನ್ನ ಹೆಂಡತಿಯ ತವರು ಮನೆ ಕೂಡಾ ಇಂಡಿ ಆಗಿರುತ್ತದೆ. ನನ್ನ ಹೆಂಡತಿ ನನ್ನ ಅಕ್ಕನ ಮಗಳೆ ಆಗಿರುತ್ತಾಳೆ ಎಂದರೆ ಸರಿ. ನನ್ನ ಹೆಂಡತಿಯನ್ನು ನಾನು ಮುಂದೆ ಕಾಲೇಜಿಗೆ ಕಳುಹಿಸಲು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

೨. ನನ್ನ ಹೆಂಡತಿ ಇಂಡಿ ಯಲ್ಲಿ ಕಾಲೇಜಿಗೆ ಅನುಕೂಲ ಆಗುತ್ತದೆ, ಅಲ್ಲಿಯೆ ಇರೋಣ ಎಂದು ಹೇಳಿದರೆ ನಾನು ನನ್ನ ನೌಕರಿ ಮಾಡುತ್ತಿದ್ದ ಘತ್ತರಗಿಯಲ್ಲಿ ಇರೋಣ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಘತ್ತರಗಿಯಲ್ಲಿ ಇದ್ದಾಗ ನನ್ನ ಹೆಂಡತಿಯನ್ನು ಅವರ ತಂದೆ ನನಗೆ ಯಾವುದೆ ಮಾಹಿತಿ ನೀಡದೆ ಕರೆದುಕೊಂಡು ಹೋಗಿರುತ್ತಾರೆ. ಆ ರೀತಿ ಕರೆದುಕೊಂಡು ಹೋಗದೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಂತರ ನನ್ನ ಹೆಂಡತಿಯನ್ನು ಕರೆಯಲು ಹೋಗಿದ್ದೆ ಆದರೆ ನನ್ನ ಹೆಂಡತಿಯ ತಂದೆ-ತಾಯಿರವರು ನನ್ನ ಹೆಂಡತಿಯನ್ನು ಕಳುಹಿಸಿರುವುದಿಲ್ಲ. ನಾವು ಕರೆಯಲು ಹೋದಾಗ ನಮ್ಮ ಜೊತೆ ಹರಳಯ್ಯ ಸರ್ ಮತ್ತು ಬೋಟಿಹಾಳ್ ಸರ್ ಮತ್ತು ಅವರ ಇಬ್ಬರು ಗೆಳೆಯರು ಇದ್ದರು. ನಾನು ನನ್ನ ಹೆಂಡತಿಗೆ ಬಂದು ಬಾಳುವೆ ಮಾಡುವಂತೆ ಕೇಳಿ, ವಕೀಲರ ಮೂಲಕ ನೋಟಿಸು ಕೂಡಾ ನೀಡಿದ್ದೆ ಎಂದರೆ ಸರಿ. ಸದರಿ ನೋಟಿಸಿಗೆ ನನ್ನ ಹೆಂಡತಿ ಉತ್ತರ ನೀಡಿದ್ದರು ಎಂದರೆ ಸರಿ.

೩. ನನ್ನ ಹೆಂಡತಿ ನೀಡಿದ ಉತ್ತರವನ್ನು ಪರಿಗಣಿಸದೆ ನಾನು ಇಲ್ಲಿ ಒಂದು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಮುಂದಿನ ಶಿಕ್ಷಣವನ್ನು ಕೊನೆಗೊಳಿಸುವ ಉದ್ದೇಶದಿಂದ ನಾನು ಸುಳ್ಳು ಕಾರಣಗಳನ್ನು ನೀಡಿ, ಒಂದು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಈಗಲೂ ಕೂಡಾ ನನ್ನ ಜೊತೆ ಬಾಳುವೆ ಮಾಡಲು ಸಿದ್ದಳಿರುತ್ತಾಳೆ ಎಂದರೆ

ಸಾಕ್ಷಿಯು ನಾನೂ ಕೂಡಾ ಸಿದ್ದನಿರುತ್ತೇನೆ ಎನ್ನುತ್ತಾರೆ. ನನ್ನ ಅಕ್ಕನ ಮೇಲಿನ ಸಿಟ್ಟಿನಿಂದ ನಾನು ಒಂದು ಸುಳ್ಳು ಕೇಸನ್ನು ನನ್ನ ಹೆಂಡತಿಯ ಮೇಲೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.